**ದಿ:07.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

ಪಾಟೀ ಸವಾಲು:- ಆರೋಪಿ ಪರ Sri.G.H.S., ವಕೀಲರಿಂದ:-

ನಾನು 10 ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ಕುಟುಂಬದಲ್ಲಿ ಒಟ್ಟು 07 ಜನ ಇರುತ್ತೇವೆ. ನಮ್ಮ ತಂದೆ ಯಜಮಾನರು ಇರುತ್ತಾರೆ. ನಾನು ಡಿಸಿಸಿ ಬ್ಯಾಂಕ್ ಪಿಗ್ಮಿ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಹಾಗೂ ಗ್ರಂಥಿಗೆ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ನನಗೆ ಡಿಸಿಸಿ ಬ್ಯಾಂಕ್ ನಿಂದ ಪಿಗ್ಮಿ ಕಲೆಕ್ಟರ್ ಆಗಿ ಯಾವುದೇ ಗುರುತಿನ ಚೀಟಿ ಇರುವುದಿಲ್ಲ. ಸಾಕ್ಷಿ ಮುಂದುವರಿದು ಡಿಸಿಸಿ ಬ್ಯಾಂಕ್ ನಿಂದ ಆದೇಶ ಪತ್ರ ನೀಡಿರುತ್ತಾರೆ ಎಂದು ಹೇಳುತ್ತಾರೆ. ಗ್ರಂಥಿಗೆ ಅಂಗಡಿಗೆ ಸಂಬಂದಿಸಿದ ಹಾಗೇ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನನಗೆ ಸಂಬಂದಿಸಿದ ಹಾಗೇ ಜಗಳೂರಿನ SBI, ಡಿಸಿಸಿ ಮತ್ತು ಕೆನರಾ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಇರುತ್ತವೆ. ಸದರಿ ಮೂರು ಖಾತೆಗಳಲ್ಲಿ 2020 ರಿಂದ ಇಲ್ಲಿಯವರೆಗೆ ರೂ.2,00,000/- ಅತಿ ಹೆಚ್ಚು ವ್ಯವಹಾರ ಮಾಡಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನನ್ನ ವಾರ್ಷಿಕ ಮತ್ತು ಮಾಸಿಕ ವರಮಾನ ತೋರಿಸಲು ಲಿಖಿತವಾಗಿ ದಾಖಲೆಗಳು ಇರುವುದಿಲ್ಲ, ಸಾಕ್ಷಿ ಮುಂದುವರಿದು ತನಗೆ ಮಾಸಿಕವಾಗಿ ರೂ.20 ಸಾವಿರ ಸಂಬಳ ಬರುತ್ತದೆ

ಎಂದು ಹೇಳುತ್ತಾರೆ. ನನ್ನ ಪಿಗ್ಮಿ ಕಲೆಕ್ಷನ್ ಸಮಯ ಪ್ರತಿದಿನ ಸಂಜೆ 04.00 ರಿಂದ 08.00 ಗಂಟೆ ಇರುತ್ತದೆ. ನನಗೆ ಪಿಗ್ಮಿ ಕಲೆಕ್ಷನ್ ಮೂಲಕ ಬರುವ ಕಮಿಷನ್ ನ್ನು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲು ತೊಂದರೆ ಇರುವುದಿಲ್ಲ. ನನ್ನದು ಒಟ್ಟು ಕುಟುಂಬ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮೂರು ಉಳಿತಾಯ ಖಾತೆಗಳ ಬ್ಯಾಂಕ್ ಸ್ಟೇಟ್ ಮೆಂಟ್ ನ್ಯಾಯಾಲಯಕ್ಕೆ ಹಾಜರುಪಡಿಸಿಲು ತೊಂದರೆ ಇರುವುದಿಲ್ಲ. ನನ್ನ ಕುಟುಂಬದಲ್ಲಿ ನನ್ನ ದುಡಿಮೆಯಿಂದ ಅವಲಂಬಿತರಾಗಿರುವುದಿಲ್ಲ. ನನಗೆ ಆರೋಪಿ 2015 ರಿಂದ ಪರಿಚಯ ಇರುತ್ತಾರೆ. ಅವರ ವಿದ್ಯಾಭ್ಯಾಸದ ಬಗ್ಗೆ ಗೊತ್ತಿರುವುದಿಲ್ಲ. ಅವರು ಯಾವ ಕಾಲೇಜಿನಲ್ಲಿ ಓದಿರುವ ಬಗ್ಗೆ ಗೊತ್ತಿರುವುದಿಲ್ಲ. 2015 ರಲ್ಲಿ ಆರೋಪಿ ಪರಿಚಯವಾದಾಗ ಬುಕ್ ಸ್ಟೋರ್ ಇಟ್ಟಿದ್ದರು. ಸದರಿ ಬುಕ್ ಸ್ಟೋರ್ ಹೆಸರು ಎಸ್‌ಬಿ ಬುಕ್ ಸ್ಟೋರ್ ಇರುತ್ತದೆ. ಆರೋಪಿಯ ಬುಕ್ ಸ್ಟೋರ್ ಯಾವ ವೇಳೆಗೆ ಕೆಲಸ ಮಾಡುತ್ತದೆ ನನಗೆ ಗೊತ್ತಿರುವುದಿಲ್ಲ. ಆರೋಪಿಯ ಬುಕ್ ಸ್ಟೋರ್ ನಮ್ಮ ಗ್ರಂತಿಗೆ ಅಂಗಡಿಯ ಮುಂದುಗಡೆ ಇದೆ ಎಂದರೆ ಸರಿ. ನಾನು ನಿಪಿ5 ಲೋಕೇಟೆಯನ್ನು ಆರೋಪಿಯ ಅಂಗಡಿಗೆ ಕಳುಹಿಸಿರುವುದಿಲ್ಲ ಎಂದರೆ ಸರಿ. ಆರೋಪಿಯ ಬುಕ್ ಸ್ಟೋರ್ ಅಂಗಡಿಯೂ ಬೆಳಿಗ್ಗೆ 9 ರಿಂದ 5 ಗಂಟೆಯವರೆಗೆ ತೆರೆದಿರುತ್ತದೆ ಎಂದರೆ ಸರಿ. ನಿಪಿ5 ಅಂಚೆ ಲಕೋಟೆಯಲ್ಲಿ ಸ್ಪಷ್ಟವಾಗಿ ಮನೆ ನಂಬರು ಮತ್ತು ಕ್ರಾಸ್ ನಮೂದು ಆಗಿರುವುದಿಲ್ಲ ಎಂದರೆ ಸರಿ. ನಾನು ನಿಪಿ5 ಆರೋಪಿಗೆ ತಲುಪಬಾರದು ಎಂದು ಸುಳ್ಳು ವಿಳಾಸ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಈ ಮೊದಲಿಗೆ ಪಿಎಲ್ ಡಿ ಬ್ಯಾಂಕ್ ಪಿಗ್ಮಿ ಖಾತೆದಾರರು ಇರುತ್ತಾರೆ. ಅವರು ನನ್ನ ಗ್ರಾಹಕರು ಇರುತ್ತಾರೆ. ಆರೋಪಿಗೆ ಸಂಬಂದಿಸಿದ ಪಿಗ್ಮಿ ಖಾತೆ ನನಗೆ ಹಣ ಜಮಾ ಮಾಡಿದ ದಾಖಲೆಗಳು ಬ್ಯಾಂಕ್ ನಲ್ಲಿ ಇರುತ್ತವೆ. ಆರೋಪಿಯೂ ನನ್ನ ಬಳಿ ಪಿಗ್ಮಿ ಖಾತೆಗೆ ಹಣ ಜಮಾ ಮಾಡುವ ಬಗ್ಗೆ ಯಾರು ನೋಡಿರುವುದಿಲ್ಲ. ಆರೋಪಿಗೆ ನಾನು ರೂ.5 ಲಕ್ಷ ಹಣವನ್ನು ನಗದು ರೂಪದಲ್ಲಿ ಆತನ ಅಂಗಡಿಯ ಬಳಿ ನೀಡಿರುತ್ತೇನೆ. ಸದರಿ ಆರೋಪಿಯ ಅಂಗಡಿಯ ಮುಂದೆ ಇರುವ ರಸ್ತೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಹಣ ನೀಡಿದೆ ಎಂದು ಹೇಳುವ ದಿನಾಂಕದಂದು

ಯಾರು ಇರುವುದಿಲ್ಲ. ನನ್ನ ಮತ್ತು ಆರೋಪಿಯ ಅಂಗಡಿ ಇರುವ ರಸ್ತೆ ಜನನಿಬಿಡ ಪ್ರದೇಶ ಎಂದರೆ ಸರಿ. ದಿ:12.11.2021 ರಂದು ನನ್ನ ಬಳಿ ರೂ.5 ಲಕ್ಷ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಆರೋಪಿಗೆ ಸದರಿ ಹಣವನ್ನು ಮನೆಯಿಂದ ತಂದು ನೀಡಿರುತ್ತೇನೆ. ಅದನ್ನು ಯಾರು ನೋಡಿರುವುದಿಲ್ಲ. ಆರೋಪಿ ರೂ.5 ಲಕ್ಷ ಹಣ ಕೇಳಿದ್ದನ್ನು ಯಾರಿಗೆ ಹೇಳಿರುವುದಿಲ್ಲ. ಅದೇ ರೀತಿ ಆರೋಪಿಗೆ ರೂ.5 ಲಕ್ಷ ಹಣ ನೀಡಿದ್ದೇನೆ ಎಂದು ಯಾರಿಗೂ ಸಹ ತಿಳಿಸಿರುವುದಿಲ್ಲ. ನಾನು ಆರೋಪಿಗೆ ಹಣ ನೀಡಿರುವ ಬಗ್ಗೆ ಯಾವುದೇ ದಾಖಲೆಗಳಲ್ಲಿ ಬರೆದಿರುವುದಿಲ್ಲ. ನಿಪಿ1 ಚೆಕ್ ನ್ನು ಆರೋಪಿಗೆ ನಾನು ಹಣ ನೀಡಿದ ದಿನದಂದು ಅವರು ನೀಡಿರುತ್ತಾರೆ. ನಿಪಿ1 ರಲ್ಲಿ ಕಾಣುವ ಬರವಣಿಗೆ ಮತ್ತು ಸಹಿ ಬೇರೆ ಬೇರೆ ಶಾಹಿಯಲ್ಲಿ ಇರುತ್ತದೆ ಎಂದರೆ ಸರಿ. ಬರವಣಿಗೆಯ ಶೈಲಿಯೂ ಸಹ ಬೇರೆ ಬೇರೆ ಇರುತ್ತದೆ ಸಾಕ್ಷಿ ಕನ್ನಡದಲ್ಲಿ ನಮೂದಾಗಿರುತ್ತದೆ ಎಂದು ಹೇಳುತ್ತಾರೆ. ನನಗೆ ಚೆಕ್ ನಲ್ಲಿ ಇರುವ ಬರವಣಿಗೆ ಯಾರು ಬರೆದರೂ ಎಂದು ನನಗೆ ಗೊತ್ತಿಲ್ಲ. ಚೆಕ್ ನಲ್ಲಿ ಕಾಣುವ ಬರವಣಿಗೆ ಆರೋಪಿಗೆ ಸಂಬದಿಂದಿಸಿದ್ದಲ್ಲ ಎಂದರೆ ಸರಿಯಲ್ಲ. ಯಾವುದೇ ಚೆಕ್ ನಲ್ಲಿ ರೂ.**5,000/-**ಮೇಲ್ಪಟ್ಟು ಇದ್ದರೆ ಕ್ರಾಸ್ ಚೆಕ್ ನೀಡಬೇಕು ಎಂದು ನಿಯಮ ಇತ್ತು ಎಂದರೆ ಸರಿಯಲ್ಲ. ನಿಪಿ**1** ಚೆಕ್ ಕ್ರಾಸ್ ಚೆಕ್ ಮತ್ತು ಅಕೌಂಟ್ ಪೇ ಚೆಕ್ ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಿಪಿ1 ರಲ್ಲಿ ಕಾಣುವ ಸಹಿಯೂ ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಮಂಜುನಾಥ, ಲೋಕೇಶ್ ಮತ್ತು ಮಹಂತೇಶ್ ನನಗೆ ಪರಿಚಯ ಇರುತ್ತಾರೆಯೇ ಎಂದರೆ ಸಾಕ್ಷಿಯೂ ಮಂಜುನಾಥ ನಮ್ಮ ಬಳಿ ಪಿಗ್ಮಿ ಪಾವತಿ ಮಾಡುತ್ತಾರೆ, ಲೋಕೇಶ್ ಪರಿಚಯ ಇರುತ್ತಾರೆ ಮಹಂತೇಶ್ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗ ಸಾಕ್ಷಿಗೆ ಜಗಳೂರು ಪೋಲಿಸರು ಪಡೆದ ಹೇಳಿಕೆಯನ್ನು ತೋರಿಸಿ ಅದರಲ್ಲಿ ಕಾಣುವ ವಿಳಾಸ ಮತ್ತು ಸಹಿ ತನ್ನದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ಹೇಳಿಕೆಯನ್ನು ನಿಡಿ1 ಎಂದು ಗುರುತಿಸಲಾಯಿತು. ನನ್ನನ್ನು ಜಗಳೂರು ಪೋಲಿಸರು ಆರೋಪಿಗೆ ಸಂಬಂದಿಸಿದ ಹಾಗೇ ಕರೆಯಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನನ್ನ ಮತ್ತು ಮಂಜುನಾಥ, ಲೋಕೇಶ್ ಮತ್ತು ಮಹಂತೇಶ್ ರವರ ವಿರುದ್ಧ ಆರೋಪಿಯೂ ತಮ್ಮ ಚೆಕ್‌ಗಳು ಕಳುವಾದ ಬಗ್ಗೆ ಪಿಸಿಆರ್

**19/2022** ರಂತೆ ಇದೇ ನ್ಯಾಯಾಲಯದಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಸದರಿ ದೂರನ್ನು ತೋರಿಸಿ ಅದನ್ನು ಒಪ್ಪಿಕೊಂಡ ಮೇರೆಗೆ ನಿಡಿ**2** ಎಂದು ಗುರುತಿಸಲಾಯಿತು. ನಿಡಿ**1** ನ್ನು ನಿಡಿ**2** ಪ್ರಕರಣಕ್ಕೆ ಸಂಬಂದಿಸಿದ ಹಾಗೇ ಜಗಳೂರು ಪೋಲೀಸ್ ಠಾಣೆಯಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ**.** ಸೆಲ್ಪ ಚೆಕ್ ಒರತುಪಡಿಸಿ ಬೇರೆ ಚೆಕ್ ಗಳಲ್ಲಿ ಹಿಂಬದಿಯಲ್ಲಿ ಸಹಿ ಮಾಡುವ ನಿಯಮ ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಿಪಿ1 ಚೆಕ್ ನಲ್ಲಿ ಎರಡು ಕಡೆ ಆರೋಪಿ ಸಹಿ ಮಾಡಿರುತ್ತಾರೆ. ನಿಪಿ1 ರಲ್ಲಿ ಕಾಣುವ ನಿಪಿ1(ಎ) ಸಹಿ ಮತ್ತು ಹಿಂಬದಿಯಲ್ಲಿ ಇರುವ ಸಹಿಯೂ ಬೇರೆ ಬೇರೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎರಡು ಸಹಿಗಳ ಅಕ್ಷರಗಳು(spelling) ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಅದು ಬೇರೆ ಬೇರೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನ್ಯಾಯಾಲಯದ ಕಲಾಪ ಮುಗಿದ ಕಾರಣ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ**

sd

ಸಿವಿಲ್ ನ್ಯಾಯಾಧೀಶರು, ಜಗಳೂರು